ಇ) ಈ ಸಂದರ್ಭದಲ್ಲಿ ಪೆಟ್ರೋಲ್ ಸಾಗಿಸುವ ವಾಹನಗಳ ತನಿಖೆ ನಡೆಸಲಾಗುತ್ತಿದೆಯೆ?

ಈ) ಕಲಬೆರಕೆ ತಡೆಗಟ್ಟಲು ಅನಿರೀಕ್ಷಿತ ತನಿಖೆಯದಾಳಿಗೆ ಸರ್ಕಾರ ಕ್ರಮ ಕೈಗೊಂಡಿದೆಯೇ? ಹಾಗೂ ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದಾದರೂ ಪ್ರಕರಣಗಳು ಬೆಳಕಿಗೆ ಬಂದಿದೆಯೆ?

ಉ) ಬಂದಿದ್ದಲ್ಲಿ ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಬಂದಿದೆ.

ಆ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗೂ ಆಹಾರ ನಾಗರೀಕ ಸರಬರಾಜು ಜಾರಿ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ಅನಿರೀಕ್ಷಿತ ದಾಳಿಗಳನ್ನು ನಡೆಸಿ ಪ್ರಕರಣಗಳನ್ನು ಪತ್ತೆ ಹಚ್ಚಿ ಅಪಾದಿತರ ವಿರುದ್ಧ ಪ್ರಕರಣಗಳನ್ನು ಪತ್ತೆ ಹಚ್ಚಿ ಅಪಾದಿತರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುದರ ಮೂಲಕ ಈ ರೀತಿಯ ಅವ್ಯವಹಾರಗಳನ್ನು ತಡೆಗಟ್ಟುವ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಇ) ಹೌದು.

ಈ) ಹೌದು.

ಉ) ಈವರೆಗೆ 248 ದಾಳಿಗಳನ್ನು ನಡೆಸಿ 3412 ಲೀಟರ್ ಸೀಮೆಎಣ್ಣೆ 9393 ಲೀಟರ್ ಪೆಟ್ರೋಲ್ ಮತ್ತು 2974 ಲೀಟರ್ ಡೀಸೆಲ್‌ನ್ನು ವಶಪಡಿಸಿ ಕೊಳ್ಳಲಾಗಿದೆ. ಹಾಗೂ ಈ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ರೀತಿಯ ಅವ್ಯವಹಾರಗಳನ್ನು ತಡೆಗಟ್ಟಲು ಹೆಚ್ಚಿನ ಕ್ರಮ ವಹಿಸುವಂತೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಹೋಟೆಲ್ ತಿಂಡಿ, ಊಟದ ಬೆಲೆಗಳನ್ನು ಇಳಿಸುವ ಕುರಿತು

2193 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೋಟೆಲ್‌ಗಳ ತಿಂಡಿ ಊಟದ ಬೆಲೆ ದಿನದಿನಕ್ಕೆ ದುಭಾರಿಯಾಗಿ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹೋಟೆಲ್ ತಿಂಡಿ ಮತ್ತು ಊಟದ ಬೆಲೆಗಳನ್ನು ಇಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಇ) ಹೋಟೆಲ್‌ಗಳಲ್ಲಿನ ಬೆಲೆಗಳನ್ನು ಕಾಲ ಕಾಲಕ್ಕೆ ತನಿಖೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ.

ಆ) ಹೋಟೆಲ್ ತಿಂಡಿ, ಕಾಫಿ ಮತ್ತು ಊಟದ ಬೆಲೆಗಳನ್ನು ನಿಯಂತ್ರಿಸುವ ಬಗ್ಗೆ ಸರ್ಕಾರಕ್ಕೆ ಸಧ್ಯದಲ್ಲಿ ಕಾನೂನಿನಲ್ಲಿ ಯಾವುದೇ ವ್ಯವಸ್ಥೆ ಇರುವುದಿಲ್ಲ, ಆದರೆ ಸರ್ಕಾರದ ಆದೇಶ ಸಂಖ್ಯೆ. ಎಫ್‌ಟಿಡಿ:10:ಡಿಐಕಂ: 84 ದಿನಾಂಕ 07-07-85 ರಲ್ಲಿ ಹೋಟೆಲುಗಳಲ್ಲಿನ ತಿಂಡಿ ಪದಾರ್ಥಗಳ ಬೆಲೆಗಳನ್ನು ಪರಾಮರ್ಶಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ಹೋಟೆಲ್ ವರ್ತಕರ ಸಂಘದ ಪ್ರತಿನಿಧಿಗಳನ್ನು

ಕರೆಯಿಸಿ ಸೌಹಾರ್ದದಿಂದ ಚರ್ಚಿಸಿ ಬೆಲೆ ಇಳಿಸುವ ಸಾಧ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಇ) ಮೇಲಿನ ವಿವರಣೆಯಿಂದ ಉದ್ಭವಿಸುವುದಿಲ್ಲ.

ಅಲ್ಪಸಂಖ್ಯಾತರ ಶಾಲೆಗಳನ್ನು ನಡೆಸುವ ನಿಯಮಗಳನ್ನು ಸರ್ಕಾರ ಬದಲಾಯಿಸುವ ಕುರಿತು

2273 - ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅಲ್ಪ ಸಂಖ್ಯಾತರ ಶಾಲೆಗಳನ್ನು ನಡೆಸುವ ನಿಯಮಗಳನ್ನು ಸರ್ಕಾರವು ಬದಲಾಯಿಸಿದೆಯೇ?

ಆ) ಹಾಗಿದ್ದರೆ, ಹೊಸ ನಿಯಮಗಳು ಯಾವುವು?

ಇ) ಪ್ರಸ್ತುತ ವರ್ಷದಲ್ಲಿ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಿದ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ನಾಲ್ಕು(4)

ಸಹಕಾರ ಬ್ಯಾಂಕುಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದೆ ಇರುವ ಬಗ್ಗೆ

2167 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕಿನ ಪ್ರಧಾನ ಕಛೇರಿ ಮತ್ತು ಶಾಖೆಗಳಲ್ಲಿರುವ ನೌಕರರ ಸಂಖ್ಯೆ?

ಆ) ಅದರಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗದ ನೌಕರರ ಸಂಖ್ಯೆ?

ಇ) ಬ್ಯಾಂಕು ನೌಕರರನ್ನು ನೇಮಗಾತಿ ಮಾಡಿಕೊಳ್ಳುವಾಗ ರೋಸ್ಟರ್ ನಿಯಮವನ್ನು ಪಾಲಿಸಿದೆಯೇ;

ಈ) ಇಲ್ಲದಿದ್ದಲ್ಲಿ ಸರ್ಕಾರದ ಸೂಚನೆಯನ್ನು ಪಾಲಿಸದಿರುವ ಬಗ್ಗೆ ಸರ್ಕಾರವು ಆಡಳಿತ ಮಂಡಳಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆಯೆ?

ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) 122

ಆ) ಪರಿಶಿಷ್ಟ ಜಾತಿ - 1

ಇ) ಇಲ್ಲ

ಈ) ಪರಿಶೀಲಿಸಲಾಗುವುದು.